MediaTAR
...Tracking, Analysis & Reportage

| | | | |
|---|---|---|---|
| **PUBLICATION** | Hosadigantha | **DATE** | 11.02.2019 |
| **EDITION** | Bangalore | **PAGE NO** | 01 |
| **HEADLINE** | Ultimate aim of Education is not Employment, but Empowerment & Enlightenment, says Honourable Vice President of India, M. Venkaiah Naidu | | |

# ಜ್ಞಾನಾರ್ಜನೆ ಮೂಲಕ ವಿಶ್ವ ಪ್ರಜೆಗಳಾಗಿ: ವೆಂಕಯ್ಯ ನಾಯ್ಡು



**ಬೆಂಗಳೂರು:** ದೇಶದ ಯುವಜನತೆ ಜ್ಞಾನರ್ಜನೆ ಮೂಲಕ ವಿಶ್ವ ಪ್ರಜೆಗಳಾಗಿ ಹೊರಹೊಮ್ಮಬೇಕು ಎಂದು ಉಪರಾಷ್ಟ್ರಪತಿ ಎಂ.ವೆಂಕಯ್ಯನಾಯ್ಡು ಹೇಳಿದರು.

ನಗರದ ಹೆಣ್ಣೂರು ಮುಖ್ಯರಸ್ತೆಯಲ್ಲಿರುವ ಸಿಎಂಆರ್ ವಿಶ್ವವಿದ್ಯಾಲಯದ ಕ್ಯಾಂಪಸ್ ಉದ್ಘಾಟಿಸಿ ಮಾತನಾಡಿದ ಅವರು, ಪ್ರಾಚೀನ ಭಾರತವು ವೈದ್ಯಕೀಯ ಪದ್ಧತಿ, ಐತಿಹಾಸಿಕ ಪರಂಪರೆ ಹಾಗೂ ಶಿಕ್ಷಣ ಪದ್ಧತಿ ಮೂಲಕ ವಿಶ್ವಗುರುವಾಗಿ ಗುರುತಿಸಿಕೊಂಡಿದ್ದು, ವಿದ್ಯಾರ್ಥಿಗಳು ಶಿಕ್ಷಣದ ಜೊತೆಗೆ ಕ್ರೀಡಾ ವಲಯ ಹಾಗೂ ತಂತ್ರಜ್ಞಾನ ಕಲಿಕೆ ಯಲ್ಲಿ ಜ್ಞಾನಾರ್ಜನೆ ಹೆಚ್ಚಿಸಿಕೊಳ್ಳಬೇಕು ಎಂದರು.

ಭಾರತದಲ್ಲಿ ಶೇ.50ರಷ್ಟು ಕೃಷಿ ಅವಲಂಬಿತರಾಗಿದ್ದೇವೆ. ಕೃಷಿಯಲ್ಲಿ ಹೊಸ- ಹೊಸ ತಂತ್ರಜ್ಞಾನಗಳು ಹಾಗೂ ಕೃಷಿ ಪದ್ಧತಿ ಅಳವಡಿಸಿಕೊಳ್ಳುವ ಮೂಲಕ ಅಭಿವೃದ್ಧಿ ಸಾಧಿಸಬೇಕಿದೆ. ಸಂಶೋಧನಾ ವಿದ್ಯಾರ್ಥಿಗಳು ಕೃಷಿ ಕ್ಷೇತ್ರಕ್ಕೆ ಅಗತ್ಯವಾದ ತಂತ್ರಜ್ಞಾನಗಳ ಅಭಿವೃದ್ಧಿಗೆ ಮುಂದಾಗಬೇಕು ಎಂದರು.

ಪೋಷಕರು ಹಾಗೂ ಅಧ್ಯಾಪಕರು ಮಕ್ಕಳನ್ನು ಪಠ್ಯ ಚಟುವಟಿಕೆಗಳಿಗೆ ಮಾತ್ರ ಸೀಮಿತ ಗೊಳಿಸಬಾರದು. ಶಿಕ್ಷಣ ಪಡೆಯುವುದು ಉದ್ಯೋಗ ಪಡೆಯುವುದಕ್ಕೆ ಎಂಬ ಭಾವನೆ ಬಿಡಬೇಕು. ಳ

> “ಜಾಗತಿಕ ಮಟ್ಟದಲಿ ಆರ್ಥಿಕ ಅಭಿವೃದ್ಧಿ ಮತ್ತು ರಕ್ಷಣಾ ವಲಯದಲ್ಲಿ ಭಾರತ ಸದೃಢವಾಗಿದ್ದು, ವಿಶ್ವದಲ್ಲಿಯೇ ಅಧಿಕ ವಿಶ್ವವಿದ್ಯಾಲಯಗಳನ್ನು ಹೊಂದಿದ್ದೇವೆ. ಗುಣಮಟ್ಟದ ಶಿಕ್ಷಣ ನೀಡುತ್ತಿದ್ದರೂ, ದೇಶದ ಶಿಕ್ಷಣ ವ್ಯವಸ್ಥೆ ಜಾಗತಿಕ ಮಟ್ಟದಲ್ಲಿ ಗುರುತಿಸಿಕೊಳ್ಳುವ ಮಟ್ಟಕ್ಕೆ ಅಭಿವೃದ್ಧಿ ಸಾಧಿಸಿಲ್ಲ.
>
> ■ ವೆಂಕಯ್ಯನಾಯ್ಡು
> ಉಪರಾಷ್ಟ್ರಪತಿ

> “1991ರಲ್ಲಿ ಅಂದಿನ ಸರ್ಕಾರ ಉದಾರೀಕರಣಕ್ಕೆ ಒತ್ತು ನೀಡಿದ್ದರಿಂದ ದೇಶದಲ್ಲಿ ಬಹು ರಾಷ್ಟ್ರೀಯ ಕಂಪನಿಗಳು ಸ್ಥಾಪನೆಯಾಗಿವೆ. ಐಟಿ ವಲಯ ಬೆಳವಣಿಗೆಯಾಗಿದೆ. ಆದರೆ, ಸರ್ಕಾರಗಳು ಶಿಕ್ಷಣ ವ್ಯವಸ್ಥೆಯ ಅಭಿವೃದ್ಧಿಗೆ ಪೂರಕ ಅನುದಾನ ನೀಡುತ್ತಿಲ್ಲ.
>
> ■ ಡಾ. ಕೆ.ಪಿ.ಗೋಪಾಲಕೃಷ್ಣ
> ನ್ಯಾಷನಲ್ ಪಬ್ಲಿಕ್ ಸ್ಕೂಲ್‌ನ ಅಧ್ಯಕ್ಷ